ಗೊತ್ತಾಯಿತಂತೆ ವಿಷಯ ಏನು ಅಂತ. ಅವನು ಅದು ಇದು ಮಾತಾಡಿ ನಿಮಗೆ ಕೆಲಸ ಸಿಗುತ್ತದೆ, ನಾನೇ ನಿಮ್ಮ ಆರ್ಡರ್‌ಗೆ ಸಹಿ ಹಾಕುವುದು. ನೀವು ಮಾಡರ್ನ್ ಇದ್ದೀರಿ. ನಿಮಗೆ ಏನೂ ಹೇಳಬೇಕಾಗಿಲ್ಲ ಅಂದನಂತೆ. ಅಷ್ಟು ಹೊತ್ತಿಗೆ ಬೇರೆಯವರು ಯಾರೋ ಬಂದಿದ್ದರಿಂದ ನಾಳೆ ಬಂದು ಮಾತನಾಡಿ ಅಂದನಂತೆ. ಅವನು ಹೇಳಿದ ಧ್ವನಿಯಲ್ಲೇ ಅವನ ಬೇಡಿಕೆ ಏನು ಅಂತ ಗೊತ್ತಾಯಿತಂತೆ.

"ಈಗ ಏನು ಮಾಡುತ್ತೀಯ? ನಿನಗೆ ಕೆಲಸವಿಲ್ಲದಿದ್ದರೆ ಏನಂತೆ, ನಿನ್ನ ಗಂಡನಿಗೆ ಕೆಲಸ ಇದೆ. ಗಂಡ ಹೆಂಡತಿ ಇಬ್ಬರೂ ಅವನಿಗೆ ಒದ್ದು ಬನ್ನಿ" ಅಂದಳಂತೆ ಅಮ್ಮ. ಆದರೆ, ಜಲಜಾ ಮೇಡಮ್ ತರಹದ ಆಗಿನ ಕಾಲದ ಮಧ್ಯಮವರ್ಗದ ಕೆಲವರಿಗೆ ಕೆಲಸ ಮಾಡುವುದು ಬರೀ ಹಣಕ್ಕಾಗಿರಲಿಲ್ಲ. ಅದು ಹೆಂಗಸರ ಸ್ವಾತಂತ್ರ್ಯ, ಸಮಾನತೆ ಇತ್ಯಾದಿ ಕಲ್ಪನೆಗಳಿಗೂ ಸಂಬಂಧಿಸಿರಲಿಲ್ಲ. ಕೆಲಸಕ್ಕೆ ಹೋಗುವುದು ಅವರ ಮನಸ್ಸಿನಲ್ಲಿ ಹೊಕ್ಕಿಬಿಟ್ಟಿದ್ದ ಜೀವನ ಶೈಲಿಯ ವಿಷಯವಾಗಿತ್ತು. ಹಾಗೆ ಹಟಹಿಡಿದು ಕಷ್ಟಪಟ್ಟು ಕೆಲಸ ಮಾಡಿದ್ದಕ್ಕೇ ಅವರ ಮಕ್ಕಳಾದ ನನ್ನಂತಹವರು ಈ ಹೊಸ ಜೀವನ ಶೈಲಿಯಲ್ಲಿ ಜೀವಿಸುತ್ತಿದ್ದೇವೆ. ಆದರೆ, ಈ ರೀತಿ ಕೆಲಸ ಮಾಡುವುದಕ್ಕೆ ಇನ್ನು ಏನೇನು ತ್ಯಾಗ ಮಾಡಬೇಕಾಯಿತೋ ನನ್ನ ಅಮ್ಮನ ತರಹದವರು? ಇಷ್ಟು ಹೇಳಿ ಶರ್ಲಿ ನನ್ನನ್ನು ಕೇಳಿದರು, "ಈಗ ಹೇಳು, ಜಲಜಾ ಮೇಡಮ್ ಏನು ಮಾಡಬೇಕಿತ್ತು? ಅವರ ಗಂಡ ಏನು ಮಾಡಬಹುದಿತ್ತು?"

"ಅವನ ಮೇಲೆ ಕಂಪ್ಲೇಂಟ್ ಕೊಡಬೇಕಿತ್ತು."

"ಈಗಲೇ ಕಂಪ್ಲೇಂಟ್ ಕೊಡುವುದು ಕಷ್ಟ. (ಶರ್ಲಿ ಈ ಕತೆ ನನಗೆ ಹೇಳಿದ್ದು ಸುಮಾರು

